# ವೀರ ವಿರಾಗಿಣಿ ಬೊಂತಾದೇವಿ

- ಡಾ.ಮಹಾದೇವಿ ಆರ್. ಹಿರೇಮಠ
ಕರ್ನಾಟಕ ಕಲಾ ಮಹಾವಿದ್ಯಾಲಯ,
ಧಾರವಾಡ–580001

ವೀರ ವೈರಾಗ್ಯದಲ್ಲಿ ಮಹಾದೇವಿಯಕ್ಕನನ್ನೇ ಅನುಕರಿಸಿ ಶರಣರ ವಲಯದಲ್ಲಿ ವೈರಾಗನಿಧಿಯಾಗಿ ಕಂಗೊಳಿಸಿದ ಮತ್ತೊಬ್ಬ ಶಿವ ಶರಣೆ ಕಾಶ್ಮೀರದ ರಾಜಕುಮಾರಿ ಬೊಂತಾದೇವಿ. ಹನ್ನೆರಡನೆಯ ಶತಮಾನದವಳಾದ ಬೊಂತಾದೇವಿಯ ಭಕ್ತಿ, ಜ್ಞಾನ, ವೈರಾಗ್ಯಗಳ ಕುರಿತು ಸೋಮನಾಥ ಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ, ಚೆನ್ನಬಸವ ಪುರಾಣಗಳು ಮುಕ್ತವಾಗಿ ವರ್ಣಿಸಿವೆ. ಬೊಂತಾದೇವಿ ಕಾಶ್ಮೀರ ದೇಶದ ಮಾಂಡವ್ಯಪುರದ ಅರಸನ ಮಗಳು, ಈಕೆಯ ಮೂಲ ಹೆಸರು ನಿಜದೇವಿ. ಇವಳು ಮೂಲತಃ ಕಾಶ್ಮೀರದ ರಾಜಕುಮಾರಿಯಾಗಿದ್ದು ಈ ಹಿಂದೆ ಕಾಶ್ಮೀರ ದೇಶದ ದೊರೆಯಾಗಿದ್ದ ಮಹಾದೇವ ಭೂಪಾಲ ಅಂದರೆ ಶರಣ ಸಮುದಾಯದಲ್ಲಿ ಕಾಯಕ–ದಾಸೋಹಗಳ ಮೂಲಕ ಮೋಳಿಗೆಯ ಮಾರಯ್ಯ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದ ಮಹಾದೇವ ಭೂಪಾಲನ ತಂಗಿಯೂ ಆಗಿದ್ದಳೆಂಬ ಪ್ರತೀತಿಯಿದೆ ಎಂಬುದಾಗಿ 'ಬಸವಯುಗದ ಶಿವಶರಣೆಯರು' ಎಂಬ ಕೃತಿಯ ಪೀಠಿಕೆಯಲ್ಲಿ ಲಲ್ಲೇಶ್ವರಿಯವರು ಪ್ರಸ್ತಾಪಿಸಿದ್ದಾರೆ.

ಅವಳಲ್ಲಿ ಬಾಲ್ಯದಲ್ಲಿಯೇ ಶಿವಭಕ್ತಿ, ಶಿವನಿಷ್ಠೆ, ಶಿವ ತಾದಾತ್ಮ್ಯ ಭಾವಗಳು ನೆಲೆಗೊಂಡು ಶಿವ ಸಾನಿಧ್ಯಕ್ಕೆ ಶರಣ ಸಾನಿಧ್ಯಕ್ಕೆ ಅಣಿಗೊಳಿಸಿದ್ದವು. ನಿಜದೇವಿ ಯೌವನಾವಸ್ಥೆಗೆ ಕಾಲಿಟ್ಟಂತೆ ಅವಳಲ್ಲಿ ಭಕ್ತಿಯೂ ಬಲಿತು ಪಕ್ವವಾಯಿತು. ಯೌವನದ ಸಹಜ ಬಯಕೆಗಳು, ಆಸೆ–ಆಕಾಂಕ್ಷೆಗಳು ಆಕೆಯ ಶಿವಭಕ್ತಿಯ ಸಂಸ್ಕಾರದಲ್ಲಿ ಮಿಂದು ವೈರಾಗ್ಯದ ತಿರುವನ್ನು ಪಡೆದವು. ನಿಜದೇವಿಯ ಅಂತರಂಗ– ಬಹಿರಂಗಗಳಲ್ಲಿ ಅನಂತ, ಬಯಲರೂಪಿ ಶಿವನೇ ಆವರಿಸಿಕೊಂಡಿದ್ದರಿಂದ ಆಕೆಗೆ ಅರಮನೆಯ ರಾಜ್ಯಸುಖಗಳು, ಉಡುಗೆ ತೊಡುಗೆಗಳು ಬೇಡವಾಗಿ ಕೊನೆಗೆ ಅರಮನೆಯನ್ನೂ ತ್ಯಜಿಸಿ ಜಂಗಮ ಸಮುದಾಯದಿಂದ ಕೇಳಿ ತಿಳಿದ ಕನ್ನಡ ನಾಡಿನಲ್ಲಿ ಕಲ್ಯಾಣ ಪಟ್ಟಣದಲ್ಲಿ ನಡೆಯುತ್ತಿರುವ ಬಸವಣ್ಣನವರ ನೇತೃತ್ವದ ಶರಣ ಚಳುವಳಿಯ ವಿಷಯವನ್ನು ಅರಿತು ಅಧ್ಯಾತ್ಮ ಸಾಧನೆಗಾಗಿ ಕನ್ನಡ ನಾಡಿಗೆ ಹೊರಟಳು.

ನಿಜದೇವಿಯ ಭಕ್ತಿಯ ನಿಲುವು ಸತಿ–ಪತಿ ಭಾವಕ್ಕಿಂತಲೂ ಮಿಗಿಲಾಗಿ ಬಸವಾದಿ ಪ್ರಮಥರ ಸಂಗದಲ್ಲಿಯೇ ತನ್ನ ಬದುಕನ್ನು ಕಳೆಯಲು ಆಕೆ ಇಚ್ಛಿಸಿದ್ದು, ಅಕ್ಕನಂತೆಯೇ ದಿಗಂಬರೆಯಾಗಿ ಬೊಂತೆ (ಕೌದಿ)ಯನ್ನು ಹೊದ್ದು ಕಾಶ್ಮೀರದಿಂದ ಕಲ್ಯಾಣಕ್ಕೆ ಹೊರಟದ್ದು ಬಸವಣ್ಣನವರನ್ನು ಒಳಗೊಂಡು ಸಮಸ್ತ ಶಿವಶರಣರ ಕ್ರಾಂತಿಕಾರಿ ವಚನ ಚಳುವಳಿಯ ವೈಚಾರಿಕ ಪ್ರಭಾವ ಪ್ರಸಾರ ಪ್ರಚಾರಗಳ ಪರಿಣಾಮದಿಂದಲೇ ಎಂಬುದರಲ್ಲಿ ಎರಡು ಮಾತಿಲ್ಲ.

ಮಹೋನ್ನತವಾದ ಉದ್ದೇಶ ಈಡೇರಲು ಮಹೋನ್ನತವಾದ ಭೂಮಿಕೆಯೇ ಬೇಕು ಎಂಬುದಕ್ಕೆ ವಚನ ಸಾಹಿತ್ಯ ಚಳುವಳಿ ಜಾಗತೀಕವಾಗಿ ಮೊದಲ ಉದಾಹರಣೆಯಾಗಿ ನಿಲ್ಲುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಈ ಕನ್ನಡ ನೆಲದ ಶರಣ ಚಳುವಳಿಯ ಪ್ರಭಾವಕ್ಕೆ ಒಳಗಾಗಿ ಬೇರೆ ಬೇರೆ ಪ್ರದೇಶಗಳ ಜನರು ಜಾತಿ–ಮತ–ವರ್ಣ–ಲಿಂಗಭೇದಗಳನ್ನು ಮರೆತು ಏಕಕಾಲಕ್ಕೆ ಸಾಮೂಹಿಕವಾಗಿ ಸ್ಪಂದಿಸಿದ್ದು ಆಶ್ಚರ್ಯವನ್ನುಂಟು ಮಾಡುತ್ತದೆ. ಹೀಗೆ ಸ್ಪಂದಿಸಿದ ವ್ಯಕ್ತಿಗಳೆಲ್ಲ ಸಾಮಾನ್ಯರಲ್ಲ. ಅವರು ಸಮಾಜದ ವಿಭಿನ್ನ ವರ್ಗಗಳಿಂದ ವಿಭಿನ್ನ ನೆಲೆಗಳಿಂದ ಸಮುದಾಯದ ವೈವಿಧ್ಯಮಯ ಸ್ಥರಗಳಿಂದ ಬಂದವರು. ಹೀಗೆ ದೂರದ ನಾಡಿನಿಂದ ಆಧ್ಯಾತ್ಮ ಸಾಧನೆಗಾಗಿ

ಕಲ್ಯಾಣಕ್ಕೆ ಬಂದವರಲ್ಲಿ ಕಾಶ್ಮೀರದ ಅರಸನಾಗಿದ್ದ ಮೋಳಿಗೆಯ ಮಾರಯ್ಯ ಮತ್ತು ಅವನ ಸತಿ ಮಹಾದೇವಿಯಮ್ಮನವರೂ ಪ್ರಮುಖರು. ಕಾಶ್ಮೀರ ರಾಜ್ಯದ ಅರಸೊತ್ತಿಗೆಯನ್ನು ತೊರೆದು, ಕಲ್ಯಾಣಕ್ಕೆ ಬಂದು ಕಟ್ಟಿಗೆಯನ್ನು ಕಡಿದು ತಂದು ಮಾರಿ ಬದುಕುವಷ್ಟು ಪ್ರೇರಣೆ ಪ್ರಭಾವಗಳನ್ನು ಶರಣರ ಚಳುವಳಿಯಿಂದ ಪಡೆದುಕೊಂಡಿದ್ದ ಶರಣ ದಂಪತಿಗಳಿವರು. ಕಾಶ್ಮೀರದಲ್ಲಿ ರಾಜನಾಗಿದ್ದಾಗಲೇ ನಿತ್ಯ ಆರು ಸಾವಿರ ಜನ ಜಂಗಮರಿಗೆ ದಾಸೋಹ ಮಾಡುತ್ತಿದ್ದ ಅರಸ ಮಹಾದೇವ ಅರಸಿ ಗಂಗಾದೇವಿ ದಂಪತಿಗಳು ಬಸವಾದಿ ಶರಣರ ಮೇಲೆ ಹೊಂದಿರುವ ಪ್ರೀತಿಯ ಮುಂದೆ ದೂರದ ಕಾಶ್ಮೀರಕ್ಕೂ, ಅರಸುತನಕ್ಕೂ ಯಾವುದೇ ಮಹತ್ವ ಕಲ್ಪಿಸಲು ಆಗದಷ್ಟು ಉದಾತ್ತವಾದುದು. ಹೀಗೆ ಬಸವಾದಿ ಶರಣ ಚಳುವಳಿಯ ಪ್ರಭಾವಕ್ಕೊಳಗಾಗಿ ವಚನ ಚಳುವಳಿಯಲ್ಲಿ ಪಾಲ್ಗೊಳ್ಳಲು ಕನ್ನಡ ನಾಡಿಗೆ ವಲಸೆ ಬಂದ ಹಲವಾರು ಶರಣರ ಬಗ್ಗೆ ವೀರಶೈವ ಕಾವ್ಯಗಳಲ್ಲಿ ವಿವರಗಳು ಸಿಗುತ್ತದೆ. ಇದೇ ವಲಸೆ ಪರಂಪರೆಯಲ್ಲಿ ಬರುವ ಇನ್ನೊಬ್ಬ ವೀರ ವಿರಾಗಿಣಿ ಶಿವಶರಣೆ ಕಾಶ್ಮೀರದ ರಾಜಕುಮಾರಿ 'ನಿಜದೇವಿ'ಯೂ ಒಬ್ಬಳು.

ಮೋಳಿಗೆಯ ಮಾರಯ್ಯ, ಮಹಾದೇವಿಯರು ರಾಜಮನೆತನದ ಐಸಿರಿ, ಭೋಗ ಭಾಗ್ಯಗಳನ್ನೆಲ್ಲ ಅನುಭವಿಸುತ್ತ, ವೈರಾಗ್ಯದಿಂದ ಭಕ್ತಿಯ ಕಡೆಗೆ ತಿರುಗಿದ ಮನಸ್ಸನ್ನು ವಿಮುಖಗೊಳಿಸಲಾಗದೆ ಬಂದವರು. ಬರುವಾಗ ಸತಿಯೊಡಗೂಡಿ ಬಂದಿರುವುದರಿಂದ ಅಥವಾ ಪತಿಯೊಡನೆ ಸತಿ ಬಂದಿರುವುದರಿಂದ ಸಮಾಜ, ರಾಜಮನೆತನದ ಕಟ್ಟುಪಾಡುಗಳು ಅಷ್ಟಾಗಿ ಬಾಧಿಸಲಿಲ್ಲವೇನೋ. ಆದರೆ 'ನಿಜದೇವಿ' ಹೆಸರಿನ ಕಾಶ್ಮೀರದ ರಾಜಕುಮಾರಿ ರಾಜಕನ್ಯೆ ರಾಜಶಕ್ತಿ, ಪ್ರಜಾಶಕ್ತಿಯನ್ನೆಲ್ಲ ಮೆಟ್ಟಿ ನಿಂತು ವೈರಾಗ್ಯವನ್ನು ತಾಳಿ ಎಲ್ಲವನ್ನೂ ತೊರೆದು ಬಂದ ಸಂಗತಿ ನಿಜಕ್ಕೂ ಅತ್ಯಂತ ದಿಟ್ಟತನದ ನಿರ್ಧಾರವೇ ಸರಿ.

ಭಕ್ತಿಪಂಥದ ಚಳುವಳಿಯಲ್ಲಿ ಬಂದ ಮಹಿಳೆಯರ ಪರಂಪರೆಯಲ್ಲಿ ಕಾಣಿಸಿಕೊಳ್ಳುವ ಬೊಂತಾದೇವಿ ನಗ್ನಳಾಗಿ ಕಾಶ್ಮೀರದಿಂದ ಕಲ್ಯಾಣಕ್ಕೆ ಬರುವಾಗ ದಾರಿಯಲ್ಲಿ ಹಲವಾರು ಅಗ್ನಿ ಪರೀಕ್ಷೆಗಳನ್ನು ಎದುರಿಸಿರಬೇಕು ಎಂದೆನಿಸುತ್ತದೆ. ಆದರೆ ಆಧ್ಯಾತ್ಮಿಕ ಸಾಧನೆಯ ಹಂತದಲ್ಲಿ ಗಂಡಸರಿಗೆ ಎದುರಾಗುವ ಸತ್ವ ಪರೀಕ್ಷೆಗಳು ವಿಷಯಾಸಕ್ತಿಯನ್ನು ಎದುರಿಗೆ ಹರಡಿ ನೋಡುವುದಾದರೆ, ಹೆಂಗಸರ ಮೇಲಂತೂ ನೇರವಾಗಿಯೇ ನಡೆಯುವ ಲೈಂಗಿಕ ಆಕ್ರಮಣಗಳು, ಹಿಂಸೆಗಳು, ಗಂಡಸರು ತಾತ್ಕಾಲಿಕ ಭೋಗಲಾಲಸೆಗಾಗಿ ಪೀಡಿಸುವ, ದಂಡಿಸುವ ಹತ್ತು ಹಲವು ಘಟನೆಗಳನ್ನು ಗಮನಿಸಬಹುದು. ಇದೇ ಮಾದರಿಯಲ್ಲಿ ಅಕ್ಕಳನ್ನು ಕೌಶಿಕ ಹಿಂಸಿಸಿದರೆ, ಕಿನ್ನರಿ ಬೊಮ್ಮಯ್ಯ ಬಗೆ ಬಗೆಯಾಗಿ ಪೀಡಿಸಿ ಪರೀಕ್ಷಿಸುತ್ತಾನೆ. ಹಾಗೆಯೇ 'ನಿಜದೇವಿ'ಯ ವೈರಾಗ್ಯ ಭಾವ ನಿಜವೋ ಸುಳ್ಳೋ ಎಂಬುದನ್ನು ತಿಳಿದುಕೊಳ್ಳಲು ಸ್ವತಃ ಶಿವನೇ ಪರೀಕ್ಷೆಗೆ ಒಳಪಡಿಸಿದನೆಂಬುದಾಗಿ ವೀರಶೈವ ಕಾವ್ಯಗಳಲ್ಲಿ ಹಲವೆಡೆ ಉಲ್ಲೇಖಗೊಂಡಿದೆ. ಅಧ್ಯಾತ್ಮದ, ದೈವೀ ನೆಲೆಯಲ್ಲಿ ಈ ಘಟನೆಗಳನ್ನು ವಿಶ್ಲೇಷಿಸುವುದಕ್ಕಿಂತಲೂ ಸಾಮಾಜಿಕ ಸಂದರ್ಭಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಇಂದು ಅತಿ ಅವಶ್ಯವೆನಿಸುತ್ತದೆ. ಹೋರಾಟದ ಹಾದಿಯಲ್ಲಿ ಕಲ್ಲು, ಮುಳ್ಳುಗಳನ್ನು ತುಳಿದು ಬಂದ ಮಹಿಳೆಯರ ಚರಿತ್ರೆಯ ಮೇಲೆ ಹುಟ್ಟಿರಬಹುದಾದ ಸಾಮಾಜಿಕ ಮಿಥ್ಯಗಳನ್ನು ಬದಿಗಿರಿಸಿ ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ಅರ್ಥೈಸಿ ನೋಡಬೇಕಾದ ಅನಿವಾರ್ಯತೆ ಎದುರಾಗುತ್ತದೆ.

'ನಿಜದೇವಿ' ಆಧ್ಯಾತ್ಮ ಸಾಧನೆಗಾಗಿ ಕಲ್ಯಾಣಕ್ಕೆ ಬರುವ ಹಾದಿಯಲ್ಲಿ ಅನೇಕ ಕಾಮುಕ ಗಂಡಸರು ಎದುರಾಗಿ ಅವಳನ್ನು ಪೀಡಿಸಿರಬಹುದು. ಅವಳು ಒಪ್ಪದೇ ಇದ್ದಾಗ ನಗ್ನಗೊಳಿಸಿರಬಹುದು. ಸ್ಪುರದ್ರೂಪಿಯಾದ ಸುಂದರ ಕನ್ಯೆಯನ್ನು ಕಂಡು ಆಸೆಪಟ್ಟು ಆಕ್ರಮಣವೆಸಗದ ಗಂಡಸರಿಲ್ಲದ ಸಮಾಜದ ಬಗ್ಗೆ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಅಷ್ಟಕ್ಕೂ 'ನಿಜದೇವಿ' ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ. ರಾಜಮನೆತನದಿಂದ ಬಂದವಳು. ಅವಳೇ ಸ್ವತಃ ತನ್ನ ಶಕ್ತಿ ಸಾಮರ್ಥ್ಯದಿಂದ ಬೌದ್ಧಿಕವಾಗಿ, ದೈಹಿಕವಾಗಿಯೂ ಹೋರಾಡಿ ಕಾಮುಕ ಗಂಡಸರನ್ನು ಸೋಲಿಸಿರಬಹುದು.

ಇಲ್ಲದಿದ್ದರೆ ರಾಜಕನ್ನೈಯಾಗಿರುವುದರಿಂದ ಸರ್ವ ರಕ್ಷಣೆಯನ್ನು ಪಡೆದೇ ಕಲ್ಯಾಣಕ್ಕೆ ಬಂದಿರಬೇಕು. ಇಲ್ಲವೇ ಆಕೆಯ ವ್ಯಕ್ತಿತ್ವವನ್ನು ಉದಾತ್ತೀಕರಿಸುವ ಸಲುವಾಗಿ ಈ ರೀತಿಯ ಕಥೆಗಳು ಹುಟ್ಟಿರಬಹುದು ಎಂದೆನಿಸುತ್ತದೆ. ಹೀಗೆ ಶಿವನಿಂದ ಪರೀಕ್ಷೆಗೆ ಒಳಗಾದ ನಿಜದೇವಿ ಶಿವನ ಕರುಣೆಯನ್ನು ಸಂಪಾದಿಸುತ್ತಾಳೆ. ಆಕೆಯ ವೈರಾಗ್ಯಕ್ಕೆ ಭಕ್ತಿಗೆ ಮೆಚ್ಚಿದ ಶಿವ ಆಕೆಯ ರಕ್ಷಣೆಗಾಗಿ ಒಂದು 'ಬೊಂತೆ'(ಕೌದಿ)ಯನ್ನು ಕೊಟ್ಟು ಹೊದ್ದುಕೊಂಡು ಹೋಗಲು ಹೇಳಿದ್ದರಿಂದ ಅಂದಿನಿಂದ ಸದಾ ಕಾಲ ಬೊಂತೆ(ಕೌದಿ)ಯನ್ನು ಹೊತ್ತ ಆಕೆ ಬೊಂತಾದೇವಿ ಎಂದು ಕರೆಯಿಸಿಕೊಂಡಳು ಎಂಬುದಾಗಿ ಪುರಾಣ ಕಾವ್ಯಗಳು ಚಿತ್ರಿಸಿವೆ. ಆದರೆ ವಾಸ್ತವದಲ್ಲಿ 'ನಿಜದೇವಿ' ಬರುವ ಸಂದರ್ಭದಲ್ಲಿ ಗಂಡಸಿನ ಆಕ್ರಮಣಕ್ಕೆ ಒಳಗಾಗಿ ಆಕೆಯ ಬಟ್ಟೆಗಳು ಸಂಪೂರ್ಣ ಹರಿದಿರಬಹುದಾದ ಸಂದರ್ಭದಲ್ಲಿ ಯಾರೋ ರಕ್ಷಣೆಗಾಗಿ ಆಕೆಗೆ ಹೊದ್ದುಕೊಳ್ಳಲು ತಮ್ಮಲ್ಲಿದ್ದ ಕೌದಿಯನ್ನು ಕೊಟ್ಟು ಆಕೆಯ ನಗ್ನ ದೇಹವನ್ನು ಮುಚ್ಚಿ ಕಳಿಸಿರಬಹುದು. ಹೀಗೆ ಕೌದಿ ಉಟ್ಟು ಬಂದವಳನ್ನು ಜನರು ಬೊಂತೆ ಹೊದ್ದವಳು ಎಂದು ಕರೆದಿರಬಹುದು. ನಂತರ ಆಕೆ ಶರಣರ ಸಮೂಹದಲ್ಲಿ ಬೆರೆತು ವಚನ ರಚಿಸಿರುವ ಪ್ರಸಂಗದಲ್ಲಿ ವಚನಕಾರರೇ ಆಕೆಯನ್ನು ಬೊಂತಾದೇವಿ ಎಂದು ಹೆಸರಿಟ್ಟು ಗುರುತಿಸಿರಬಹುದು ಎಂದೇನಿಸುತ್ತದೆ.

ಇಷ್ಟೆಲ್ಲ ಕಥೆಯಲ್ಲಿ ಅಡಗಿರುವ ಬೊಂತಾದೇವಿಯ ವಚನಗಳು ಅಲ್ಪ ಪ್ರಮಾಣದಲ್ಲಿವೆ. ಕಲ್ಯಾಣ ಕ್ರಾಂತಿಯಿಂದ ಚದುರಿ ಹೋದ ವಚನ ಸಂಪತ್ತು ಇನ್ನೂ ಅಲ್ಲಲ್ಲಿ ನಿಧಿಯ ರೂಪದಲ್ಲಿ ಹುಗಿದು ಹೋಗಿರುವುದರಿಂದ ಸಿಗುವ ಸಂಭವವೂ ಇದೆ. ಸದ್ಯ ಅವಳ 5 ವಚನಗಳು 'ಓ ಎಂಬಾತನೆ ಬಿಡಾಡಿ' ಎಂಬ ಅಂಕಿತದಿಂದ ದೊರೆತವುಗಳನ್ನು ಬೊಂತಾದೇವಿಯ ವಚನಗಳು ಎಂದು ಗುರುತಿಸಲಾಗಿದೆ. 'ಬಿಡಾಡಿ' ಅಂಕಿತವೇ ಆಕೆಯ ಮುಕ್ತ ಮನಸ್ಸು, ವ್ಯಕ್ತಿತ್ವವನ್ನು ತೋರಿಸುತ್ತದೆ. ಯಾವ ಬಂಧನವನ್ನೂ ಅಪೇಕ್ಷೆ ಪಡದ ಬೊಂತಾದೇವಿಯ ವಚನಗಳು ಸ್ವತಂತ್ರ ಮನೋವೃತ್ತಿಯನ್ನು ಎತ್ತಿ ತೋರಿಸುತ್ತವೆ. ಅವಳ ಉಪಲಬ್ದ ಐದು ವಚನಗಳಲ್ಲಿಯೂ ಇತರೆ ಯಾವುದೇ ವಚನಕಾರರ ಪ್ರಭಾವ, ಪ್ರೇರಣೆಯ ಸುಳುಹು ದೊರೆಯುವುದಿಲ್ಲ. ಬೊಂತಾದೇವಿ ವಚನ ರಚನೆಗಿಂತಲೂ ಕ್ರಿಯಾತ್ಮಕ ಸಾಧನೆಯ ಬದುಕನ್ನು ಸಾಧಿಸಿರಬಹುದು ಇಲ್ಲವೆ ಅವಳು ರಚಿಸಿರುವ ವಚನಗಖು ಉಪಲಬ್ದವಾಗಿರಲಿಕ್ಕಿಲ್ಲ ಎಂದೆನಿಸುತ್ತದೆ.

ಬಸವಣ್ಣನವರು 'ತನ್ನರಿವೆ ತನಗೆ ಗುರು' ಎಂಬ ಮಾತನ್ನು ಹೇಳಿದ್ದರೂ ಸಹಿತ ವೈದಿಕ ನೆಲೆಯಿಂದ ಬಂದ ನಮ್ಮ ಜನಸಾಮಾನ್ಯರಿಗೆ ಬೇಗನೆ ಇದನ್ನು ಅರಗಿಸಿಕೊಳ್ಳಲು ಆಗಿರಲಿಕ್ಕಿಲ್ಲ. ಹೀಗಾಗಿ ದೇವಾಲಯದ ಕಲ್ಪನೆಗೆ ಪರ್ಯಾಯವಾಗಿ ದೇಹ ದೇವಾಲಯವನ್ನು ಸ್ಥಾವರ ದೇವರ ಕಲ್ಪನೆಗೆ ಪರ್ಯಾಯವಾಗಿ ಇಷ್ಟಲಿಂಗವನ್ನು ಕೊಟ್ಟು ಅವರನ್ನು ಸಾಮಾಜಿಕ ಚಳುವಳಿಗೆ ತೊಡಗಿಸಿದ್ದು ನಮ್ಮ ಮುಂದಿದೆ. ಇದೇ ಆಶಯವನ್ನು,

"ಅರಿವೆ ಬಿಡಾಡಿ, ಅರಿಯದೆ ಬಿಡಾಡಿ,
ಮರವೆ ಬಿಡಾಡಿ, ಮರೆಯದೆ ಬಿಡಾಡಿ
ಅರಿವರತು ಕುರುಹಿಲ್ಲದಾತ ನೀನೆ ಬಿಡಾಡಿ"[1]

ಸಾಧನೆಯ ಪಥದಲ್ಲಿ ಗುರಿಗಮ್ಯತೆಗೆ ಬೇಕಾದದ್ದು ಅರಿವು. ಅದೊಂದು ಇರಬೇಕು. ಗುರುತಿಲ್ಲ, ಆಕಾರವಿಲ್ಲದಾತ ನೀನೇ ಬಿಡಾಡಿ, ಎಂಬ ಶಿವನ ಸ್ವತಂತ್ರ ವ್ಯಕ್ತಿತ್ವದ ಪರಿಕಲ್ಪನೆ ಇಲ್ಲಿದೆ.

"ಅಂತಾಯಿತ್ತಿಂತಾಯಿತ್ತೆಂತಾಯಿತ್ತೆನಬೇಡ,
ಅನಂತನಿಂತಾತನೆಂದರಿದಡೆಯೂ ಬಿಡಾಡಿ
ಕರೆದಡೆ ಓ ಎಂಬುದು ನಾದವೊ ಬಿಂದುವೊ
ಪ್ರಾಣವೊ ಇದಾವುದು? ಬಲ್ಲಡೆ ನೀ ಹೇಳಾ ಬಿಡಾಡಿ

ನಾಲ್ಕು ವೇದ, ಹದಿನಾರು ಶಾಸ್ತ್ರ, ಹದಿನೆಂಟು ಪುರಾಣ,
ಇಪ್ಪತ್ತೆಂಟಾಗಮ ಇದಪ್ರತಿ ಬಿಡಾಡಿ
ಶಬ್ದವೆ ಬ್ರಹ್ಮ ಶಬ್ದವೆ ಸಿದ್ಧ,
ಶಬ್ದವೆ ಶುದ್ಧ ಕಾಣಿರೆ, ಬಿಡಾಡಿ"[2]

ವೈದಿಕ ಮೂಲದ ಪುರಾಣ, ಆಗಮ, ಶಾಸ್ತ್ರಗಳ ಬಗ್ಗೆ ಬೊಂತಾದೇವಿಗಿರುವ ಅರಿವು ಯಾವ ಬಂಧನಕ್ಕೂ ಒಳಗಾಗದ ಬಯಲರೂಪಿ ಶಿವನನ್ನು ಸಂಕೇತಿಸುತ್ತದೆ. ಅಲ್ಲದೆ ವಚನಕಾರ್ತಿಯ ಸ್ವತಂತ್ರ ಮನೋವೃತ್ತಿಯನ್ನು ಪ್ರತಿನಿಧಿಸುತ್ತದೆ. ಈಕೆಯ ಎಲ್ಲ ವಚನಗಳೂ ಶಿವನ ಸರ್ವವ್ಯಾಪಕತ್ವವನ್ನು ಸಾರುತ್ತವೆ. ನೆಲ, ಆಕಾಶ, ಗಾಳಿ, ನೀರು, ಬೆಳಕು ಈ ಪಂಚಭೂತಗಳಿಗೆ ಜಾತಿ–ಮತ–ಕುಲವೆಂಬ ಭೇದವಿಲ್ಲ. ಅವು ಎಲ್ಲರಿಗೂ ಎಲ್ಲವನ್ನೂ ಸಮಾನವಾಗಿ ಹಂಚುತ್ತವೆ. ಅದನ್ನರಿಯದ ಅಜ್ಞಾನಿಗಳು ಅಡ್ಡಗೋಡೆ ಕಟ್ಟಿ ಒಳ–ಹೊರಗೆಂಬ, ಮಡಿ–ಮೈಲಿಗೆಗಳೆಂಬ ಭೇದವನ್ನುಂಟು ಮಾಡುತ್ತಾರೆ. ಅಂಥವರ ನಡತೆಯನ್ನು ಖಂಡಿಸುವ ಬೊಂತಾದೇವಿಯ ಒಂದು ವಚನ ಹೀಗಿದೆ.

"ಊರ ಒಳಗಣ ಬಯಲು,
ಊರ ಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣ ಬಯಲು,
ಊರ ಹೊರಗೆ ಹೊಲೆಬಯಲೆಂದುಂಟೆ?
ಎಲ್ಲಿ ನೋಡಿದಡೆ ಬಯಲೊಂದೆ;
ಭಿತ್ತಿಯಿಂದ ಒಳಹೊರಗೆಂಬನಾಮವೈಸೆ,
ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ"[3]

ಎನ್ನುವಲ್ಲಿ, ಆಕೆಯ ಸಮತಾಭಾವದ ಹಾಗೂ ಆಧ್ಯಾತ್ಮಿಕ ಸಾಧನೆಯ – ಔನ್ನತ್ಯವನ್ನು ಕಾಣಬಹುದಾಗಿದೆ. ಬೊಂತಾದೇವಿಯ ಧೈರ್ಯ–ಸ್ಥೈರ್ಯಗಳು ಮಹಿಳಾ ಲೋಕಕ್ಕೆ ಮಾದರಿಯಾಗಿವೆ. ಜ್ಞಾನವಂತಹದ್ದೆಂದರೆ ಇವೆಲ್ಲವುಗಳ ಹೂರಣ ಸ್ವತಂತ್ರ ಮನೋವೃತ್ತಿಗೆ, ವ್ಯಕ್ತಿತ್ವಕ್ಕೆ ಹೊರಗಾದದ್ದು ಎಂಬುದನ್ನು ಒತ್ತಿ ಹೇಳುತ್ತಾಳೆ. ಅದೇ ತನ್ನನ್ನು ತಾನು ಗೌರವಿಸಿಕೊಳ್ಳುವ ಪ್ರೀತಿಸಿಕೊಳ್ಳುವುದರ ಮೂಲಕ ಜನರನ್ನು ಪ್ರೀತಿಸುವ ಗೌರವಿಸುವುದರಲ್ಲಿಯೇ ಶಿವನ ಒಲುಮೆ ಇದೆ ಎಂಬುದನ್ನು ಸರಳವಾಗಿ ಶರಣರು ಹೇಳಿಕೊಟ್ಟಿದ್ದರು.

ಬೊಂತಾದೇವಿಯ ವಚನಗಳು ಸ್ವತಂತ್ರ ವ್ಯಕ್ತಿತ್ವವನ್ನು ಪ್ರತಿಪಾದಿಸುತ್ತಲೇ ಶಿವನ ಸ್ವರೂಪ, ಅನಂತತೆಯ ಬಗ್ಗೆ ಒತ್ತಿ ಹೇಳುವವುಗಳಾಗಿವೆ. ರಾಜಮನೆತನದಿಂದ ಬಂದು ಕಡುಕಷ್ಟ ಕೋಟಲೆಯನ್ನು ದಾಟಿ ಶರಣ ಚಳುವಳಿಯಲ್ಲಿ ಗುರುತಿಸಿಕೊಂಡು, ತನ್ನ ಸಾಮಾಜಿಕ, ಧಾರ್ಮಿಕ ಸಾಧನೆ, ಕಾಳಜಿ, ಸೇವೆಯನ್ನು ವಚನ ರಚನೆಯ ಮೂಲಕ ಬಿಟ್ಟು ಹೋದ ಬೊಂತಾದೇವಿ ಕಲ್ಯಾಣ ಕ್ರಾಂತಿಯ ನಂತರ ಎಲ್ಲ ಶರಣರ ಹಾಗೇ ದಿಕ್ಕು ದಿಕ್ಕಿಗೆ ಚದುರಿ ಹೋದವರ ಹಾದಿ ಹಿಡಿಯದೆ, ಇದ್ದ ಸ್ಥಳದಲ್ಲಿಯೇ ನಿಂತು ಬದುಕುವ ಸಾಧ್ಯತೆಗಳನ್ನು ಗುರುತಿಸಿಕೊಂಡು. ಇಷ್ಟಲಿಂಗದಲ್ಲಿ ಅಡಗುತ್ತಾಳೆ ಎನ್ನುವುದಕ್ಕಿಂತಲೂ ಬಿಜ್ಜಳನ ಸೈನಿಕರಿಗೆ ಹೆದರಿ ಹೋಗದೆ ಸಹಜ ಸ್ಥಿತಿಯಲ್ಲಿ ಬದುಕಿನ ಮುಕ್ತಾಯವನ್ನು ಕಂಡುಕೊಂಡಿರಬಹುದು ಎಂದೆನಿಸುತ್ತದೆ. ಆಕೆ ಹೊದ್ದ ಬೊಂತೆಯ ಬಗ್ಗೆ ನಂತರವೂ ಕಥೆ ಹುಟ್ಟಿ ಅದು ಆಕಾಶಕ್ಕೆ ಹಾರಿ ಹೋಗಿ ಬಯಲಾಯಿತು ಎಂದಿದ್ದಾರೆ ಪುರಾಣ ಕವಿಗಳು. ಹೀಗೆ ಕೌದಿಯನ್ನು ಹೊದ್ದು ಬದುಕಿದ ಬೊಂತಾದೇವಿ ಅಧ್ಯಾತ್ಮದ, ವೀರ ವೈರಾಗ್ಯಕ್ಕೊಂದು ನಿದರ್ಶನವಾಗಿ ಬದುಕಿ ಸಾರ್ಥಕ್ಯ ಹೊಂದಿದವಳೆಂದು ಕರೆದು ಆಕೆಯ ಉದಾತ್ತ ವಿಚಾರ ಆಚಾರಗಳನ್ನು ಸಾಮಾಜಿಕ ನೆಲೆಯಲ್ಲಿ ಅರ್ಥ

ಮಾಡಿಕೊಂಡು, ಚಳುವಳಿಗೆ ಆಕೆಯಿಂದ ಸಂದ ಮಹತ್ವದ ಕಾಣಿಕೆಯನ್ನು ಗಮನಿಸಿ. ಅವಳ ಆದರ್ಶ ಬದುಕಿನ ಪ್ರೇರಣೆಯೊಂದಿಗೆ ನವಸಮಾಜವನ್ನು ಕಟ್ಟುವ ಸಾಮರ್ಥವನ್ನು ಪಡೆದುಕೊಳ್ಳಬೇಕಾದ ಅವಶ್ಯಕತೆ ಇದೆ.

**ಕೊನೆಯ ಟಿಪ್ಪಣಿ:**

1. ವೀರಣ್ಣ ರಾಜೂರ, (ಸಂ), ಶಿವಶರಣೆಯರ ವಚನ, ಸಂಪುಟ–5. ಪುಟ–391
2. ಅದೇ, ಪುಟ–391
3. ಅದೇ, ಪುಟ–391